ಸಕಲೇಶಪುರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

ಸಿ ಸಿ ಸಂಖ್ಯೆ 1238-2024:

ಫಿರ್ಯಾದುದಾರರು ಃ ರಾಜ್ಯದ ಪರವಾಗಿ

ನಗರ ಪೊಲೀಸ್ ಠಾಣೆ

-ವಿರುದ್ದ-

ಆರೋಪಿತರು ಃ ನೀಲಕಂಠ ಮತ್ತು ಇತರರು

**:ದೋಷಾರೋಪಣೆ :**

ನಾನು ಶ್ರೀ ಜಯಪ್ರಕಾಶ್.ವಿ. ಬಿ.ಎ., ಎಲ್.ಎಲ್.ಬಿ., ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ನಾನು ಆರೋಪಿತರಾದಃ

| | |
|---|---|
| ಆ.1<br><br>ಆ.2 | ನೀಲಕಂಠ ಬಿನ್ ಶಿವಯ್ಯ, ವಯ್ಯಸ್ಸು 54 ವರ್ಷ, ವ್ಯವಸಾಯ<br>ನವೀನ ಕುಮಾರ ಉಃ ಪಾಪು ಬಿನ್ ಲೇಟ್ ಬಸವಯ್ಯ , ವಯ್ಯಸ್ಸು 50 ವರ್ಷ, ವ್ಯವಸಾಯ |
| ಆ.3 | ಗುರುಮೂರ್ತಿ ಬಿನ್ ಶಾಂತಮಲ್ಲಯ್ಯ, ವಯ್ಯಸ್ಸು 53 ವರ್ಷ, ವ್ಯವಸಾಯ |
| ಆ.4 | ಚಂದ್ರಯ್ಯ ಬಿನ್ ಮಲ್ಲಯ್ಯ , ವಯ್ಯಸ್ಸು 73 ವರ್ಷ, ಕೂಲಿ<br>ಆ.1 ರಿಂದ 4 ಹಸಿಡೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು , ಹಾಸನ ಜಿಲ್ಲೆ ವಾಸಿಗಳು |

| | |
|---|---|
| ಆ.5 | ರುದ್ರಯ್ಯ ಉಃ ರುದ್ರಪ್ಪ ಬಿನ್ ತಮ್ಮಣ್ಣ, ವಯ್ಯಸ್ಸು 72 ವರ್ಷ, ಕೂಲಿ , |
| ಆ.6 | ಮಂಜುನಾಥ ಬಿನ್ ಲೇಟ್ ಚಿನ್ನಸ್ವಾಮಿ , ವಯ್ಯಸ್ಸು 49 ವರ್ಷ, ವ್ಯವಸಾಯ |
| ಆ.7 | ಗಣೇಶ ಬಿನ್ ರಾಮಣ್ಣ , ವಯ್ಯಸ್ಸು 57 ವರ್ಷ, ಚಾಲಕ ವೃತ್ತಿ,<br>ಆ.5 ರಿಂದ 7 ಕುಡುಗರಹಳ್ಳಿ ಗ್ರಾಮ , ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ ವಾಸಿಗಳು |
| ಆ.8 | ಜಯಣ್ಣ ಬಿನ್ ದಾಸಪ್ಪ , ವಯ್ಯಸ್ಸು 50 ವರ್ಷ, ವಾಪಾರಸ್ಥ ವಾಸ ಬಾಳ್ಳುಪೇಟೆ ಗ್ರಾಮ , ಸಕಲೇಶಪುರ ತಾಲ್ಲೂಕು |

ನಿಮಗೆ ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆಃ

1. ದಿನಾಂಕಃ10-10-2024 ರಂದು ಸುಮಾರು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ಚಾ ಸಾ 1 ಗೀತಾ ಎಂ.ಸಿ ಇವರು ತಮ್ಮ ಜಮೀನಿನಲ್ಲಿರುವಾಗ ಮೇಲ್ಕಂಡ ಆರೋಪಿಗಳಾದ ನೀವುಗಳು ಅಕ್ರಮ ಕೂಟ ಕಟ್ಟಿಕೊಂಡು ಅಪರಾಧವನ್ನೆಸಗುವ ಏಕೋದ್ದೇಶವನ್ನು ಹೊಂದಿದ್ದು, ಆ ನಿಮಿತ್ತದಿಂದ ಮೇಲ್ಕಂಡ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ.189(2) ಸಹ ಕಲಂ.190 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ,ಹಾಗೂ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಅಕ್ರಮ ಕೂಟದ

ಸದಸ್ಯರಾಗಿದ್ದುಕೊಂಡು ಅಪರಾಧವನ್ನೆಸಗುವ ಏಕೋದ್ದೇಶವನ್ನು ಹೊಂದಿ ಚಾ ಸಾ 1 ರವರ ಜಮೀನಿಗೆ ಅತಿಕ್ರಮ ಪ್ರವೇಶವನ್ನು ಮಾಡಿದ್ದು, ಆ ನಿಮಿತ್ತದಿಂದ ಮೇಲ್ಕಂಡ ಆರೋಪಿತರಾದ ನೀವುಗಳು , ಭಾರತೀಯ ನ್ಯಾಯ ಸಂಹಿತೆ ಕಲಂ.329(3) ಸಹ ಕಲಂ.190 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ,ಹಾಗೂ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿದ್ದುಕೊಂಡು ಅಪರಾಧವನ್ನೆಸಗುವ ಏಕೋದ್ದೇಶವನ್ನು ಹೊಂದಿ ಚಾ ಸಾ 1 ರವರ ಜಮೀನಿಗೆ ಅತಿಕ್ರಮ ಪ್ರವೇಶವನ್ನು ಮಾಡಿದ್ದೂ ಅಲ್ಲದೇ ನಿಮ್ಮಗಳ ಪೈಕಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಚಾ ಸಾ 1 ರವರ ಮೈ ಕೈ ಮುಟ್ಟಿ ಎಳೆದಾಡಿದ್ದು ಮಾನಭಂಗವನ್ನುಂಟು ಮಾಡಲು ಪ್ರಯತ್ನಿಸಿದ್ದು, ಆ ನಿಮಿತ್ತದಿಂದ ಮೇಲ್ಕಂಡ ಒಂದು ಮತ್ತು ಎರಡನೇ ಆರೋಪಿಯಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ.74 ಸಹ ಕಲಂ.190 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

4. ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ,ಹಾಗೂ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿದ್ದುಕೊಂಡು ಅಪರಾಧವನ್ನೆಸಗುವ ಏಕೋದ್ದೇಶವನ್ನು ಹೊಂದಿ ನಿಮ್ಮಗಳ ಪೈಕಿ 3 ರಿಂದ 8 ನೇ ಆರೋಪಿಗಳಾದ ನೀವುಗಳು ಚಾ ಸಾ 1 ರವರನ್ನು ಉದ್ದೇಶಿಸಿ ಸೂಳೆಮುಂಡೆ, ಲೋಫರ್ ಮುಂಡೆ ಎಲ್ಲಿ ನಿನ್ನ ಗಂಡ ಎಂದು ಬಾಯಿಗೆ ಬಂದ ಹಾಗೆ ಅವಾಚ್ಯ ಶಬ್ದಗಳಿಂದ ಬೈದ್ದು ಅವಮಾನಪಡಿಸಿ, ಇದರಿಂದ ಚಾ ಸಾ 1 ರವರು ಉದ್ರೇಕಗೊಂಡು ಸಾರ್ವಜನಿಕ ಶಾಂತಿ ಭಂಗಬರುವಂತೆ ಮಾಡಿದ್ದು, ಆ

ನಿಮಿತ್ತದಿಂದ ಮೇಲ್ಕಂಡ 3 ರಿಂದ 8 ನೇ ಆರೋಪಿತರಾದ ನೀವುಗಳು , ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹ ಕಲಂ.190 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

5. ಐದನೆಯದಾಗಿ ಹಾಗೂ ಕಡೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ,ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿದ್ದುಕೊಂಡು ಅಪರಾಧವನ್ನೆಸಗುವ ಏಕೋದ್ದೇಶವನ್ನು ಹೊಂದಿ ಚಾ ಸಾ 1 ರವರನ್ನು ಉದ್ದೇ|ಶಿಸಿ ನಿನ್ನ ಗಂಡ ಮತ್ತು ನೀನು ಈ ಜಾಗ ಖಾಲಿ ಮಾಡದಿದ್ದರೆ ನಿಮ್ಮನ್ನು ಕೊಲೆ ಮಾಡುವುದಾಗಿ ಮೇಲ್ಕಂಡ ಎಲ್ಲಾ ಆರೋಪಿಗಳೂ ಸಹಾ ಸೇರಿ ಚಾ ಸಾ 1 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿದ್ದು, ಆ ನಿಮಿತ್ತದಿಂದ ಮೇಲ್ಕಂಡ ಆರೋಪಿಪಿತರಾದ ನೀವುಗಳು . ಭಾರತೀಯ ನ್ಯಾಯ ಸಂಹಿತೆ ಕಲಂ.351(2) ಸಹ ಕಲಂ.190 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

**ಆರೋಪಗಳಿಗೆ ಆರೋಪಿಯ ಉತ್ತರ**

**1. ಮೇಲಿನಂತೆ ಆರೋಪಿಸಿದ ದೋಷಾರೋಪಣೆಗಳನ್ನು ಓದಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೇ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯನ್ನು ಬಯಸುತ್ತೀರಾ?**

ಉ.

**ಮೇಲಿನಂತೆ ಆರೋಪಗಳನ್ನು ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಆವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂಬುದಾಗಿ ದೃಢೀಕರಿಸಲಾಗಿದೆ.**

ಸ್ಥಳಃಸಕಲೇಶಪುರ

ದಿನಾಂಕಃ 11-09-2025 ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು

ಜೆಎಂಎಫ್‌ಸಿ ರವರ ನ್ಯಾಯಾಲಯ,
ಸಕಲೇಶಪುರ

ಆರೋಪಿತರುಃ

ಆ.**1**

ಆ.**2**

ಆ.**3**

ಆ.**4**

ಆ.**5**

ಆ.**6**

ಆ.**7**

ಆ.**8**